e ಜೀವನ

# ಬೆಂಗಳೂರಿಗೆ ಸಂದ ಗೌರವ

**ಕ**ಳೆದ ಮೂರು ತಿಂಗಳಲ್ಲಿ ಬೆಂಗಳೂರಿಗೆ ಭೇಟಿ ನೀಡಿರುವ ಗಣ್ಯರ ಪಟ್ಟಿಯನ್ನು ಗಮನಿಸಿದರೆ, ವಿಶ್ವದ ಗಮನವೆಲ್ಲಾ ಇಂದು ಭಾರತದ ಐಟಿ ಕಣಿವೆಯೆಡೆಗೆ ಹರಿದಿರುವುದು ಮನದಟ್ಟಾಗುತ್ತದೆ.

ವಿದೇಶೀ ಗಣ್ಯರು ಬೆಂಗಳೂರಿಗೆ ಭೇಟಿ ನೀಡುವ ಪ್ರಕ್ರಿಯೆ ಹೊಸದೇನೂ ಅಲ್ಲ. ಇತ್ತೀಚಿನ ವರ್ಷಗಳಲ್ಲಿ ಭಾರತಕ್ಕೆ ಭೇಟಿ ನೀಡಿರುವ ಬಹುತೇಕ ವಿದೇಶೀ ಪ್ರಮುಖರು ಬೆಂಗಳೂರನ್ನು ತಮ್ಮ ಪ್ರವಾಸ ಯೋಜನೆಯಲ್ಲಿ ಸೇರಿಸಿಕೊಳ್ಳುವುದು ವಾಡಿಕೆ. ಕೆಲವು ವರ್ಷಗಳ ಹಿಂದೆ ಭಾರತಕ್ಕೆ ಭೇಟಿ ನೀಡಿದ ಬಿಲ್‌ಗೇಟ್ಸ್, ಬೆಂಗಳೂರನ್ನು ಕಡೆಗಣಿಸಿ ಹೈದರಾಬಾದನ್ನು ಮಾತ್ರ ಸಂದರ್ಶಿಸಿದಾಗ ಅದೊಂದು ದೊಡ್ಡ ವಿವಾದವೇ ಆಗಿತ್ತು. ಆದರೆ, ಬಿಲ್‌ಗೇಟ್ಸ್ ತಮ್ಮ ಸಾಫ್ಟ್‌ವೇರ್ ಅಭಿವೃದ್ಧಿ ಕೇಂದ್ರವನ್ನು ಹೈದರಾಬಾದಿನಲ್ಲಿ ಸ್ಥಾಪಿಸಿರುವುದಕ್ಕೆ ಈಗ ಪಶ್ಚಾತ್ತಾಪಪಟ್ಟುಕೊಳ್ಳುತ್ತಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. 1998-2000ದ ಬೃಹತ್ ಐಟಿ ಅಲೆಯಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೈದರಾಬಾದನ್ನು 'ಸೈಬರಾಬಾದ್' ಎಂದು ಪ್ರಚಾರ ಮಾಡಿದ್ದೇನೋ ನಿಜ. ಆದರೆ, ಈಗ ಹೈದರಾಬಾದಿನ ಐಟಿ ಸಾಧನೆಯನ್ನು ಗಮನಿಸಿದರೆ ಅದು ಎಲ್ಲರ ನಿರೀಕ್ಷೆಯನ್ನೂ ಹುಸಿಗೊಳಿಸಿದೆ.

ಬೆಂಗಳೂರು ವಿಶ್ವವಂದ್ಯ ಐಟಿ ಕ್ಷೇತ್ರವಾಗಲು ವಿಶೇಷ ಪ್ರಯತ್ನವೇನೂ ಮಾಡಿಲ್ಲ. ಇಲ್ಲಿನ ಪರಿಸರ, ಕೈಗಾರಿಕೆಗಳಿಗೆ ಬೆಂಬಲ ಮತ್ತು ಅನುಕೂಲಕರ ಹವಾಮಾನಗಳು ಐಟಿ ಬೆಳವಣಿಗೆಗೆ ಹೇಳಿಮಾಡಿಸಿದಂತಿವೆ. ಅಮೇರಿಕದ ಸಿಲಿಕಾನ್ ವ್ಯಾಲಿಯು ಐಟಿ ಬೆಳವಣಿಗೆಗೆ ಪ್ರೋತ್ಸಾಹಕವಾಗಿರುವುದು ಈ ಕಾರಣಗಳಿಗಾಗಿಯೇ. ಇತ್ತೀಚಿನ (2001ರ) ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಸೂಚ್ಯಂಕದಲ್ಲಿ ಬೆಂಗಳೂರನ್ನು ತಂತ್ರಜ್ಞಾನದ ಕೇಂದ್ರಬಿಂದುವೆಂದು ಗುರುತಿಸಲಾಗಿದೆ.

ಕಳೆದ ಮೂರು ತಿಂಗಳಲ್ಲಿ ಬೆಂಗಳೂರನ್ನು ನೋಡಬಂದಿರುವ ವಿದೇಶೀ ಗಣ್ಯರೆಂದರೆ, ಜರ್ಮನಿಯ ಚಾನ್ಸಲರ್ ಶ್ರೋಡರ್, ಬ್ರಿಟನ್‌ನ ಪ್ರಧಾನಿ ಟೋನಿ ಬ್ಲೇರ್ ಮತ್ತು ಚೀನಾದ ಪ್ರಧಾನಿ ಝೂ ರಾಂಗ್‌ಜಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ವಿಶ್ವ ಆರ್ಥಿಕ ಹಿನ್ನಡೆಯ ಈ ಸಂದರ್ಭದಲ್ಲೂ ಇವರೆಲ್ಲರೂ ಬೆಂಗಳೂರಿನ ಐಟಿ ಬೆಳವಣಿಗೆಯಲ್ಲಿ ಆಸಕ್ತಿ ತೋರಿರುವುದು.

ಆರ್ಥಿಕ ಹಿನ್ನಡೆ, ಸೆಪ್ಟೆಂಬರ್ 11ರ ದಾಳಿ ಮತ್ತು ವಿಶ್ವದೆಲ್ಲೆಡೆ ಹೆಚ್ಚಿರುವ ಭಯೋತ್ಪಾದನೆಯ ಕರಿನೆರಳಿನ ನಡುವೆಯೂ ಬೆಂಗಳೂರು ತನ್ನತ್ತ ಹೊಸ ಕಂಪನಿಗಳು, ಐಟಿ ಆಸಕ್ತರನ್ನು ಮತ್ತು ವಿದೇಶೀ ಬಂಡವಾಳ ಹೂಡುವವರನ್ನು ಆಕರ್ಷಿಸುತ್ತಿರುವುದು ಇಲ್ಲಿನ ಐಟಿ ಪ್ರಗತಿಗೆ ಹಿಡಿದ ಕನ್ನಡಿ. ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಯಶಸ್ವಿ ಐಟಿ ಡಾಟ್‌ಕಾಮ್ ಪ್ರದರ್ಶನವೂ ಬೆಂಗಳೂರಿನ ಆತ್ಮಸ್ಥೈರ್ಯವನ್ನು ಸೂಚಿಸುತ್ತದೆ.

ಭೇಟಿ ನೀಡುವ ವಿದೇಶೀ ಗಣ್ಯರಿಗೆ ಸಹಜವಾಗಿಯೇ ಇನ್‌ಫೋಸಿಸ್ ಮತ್ತು ವಿಪ್ರೋಗಳು ನೆಚ್ಚಿನ ಪ್ರೇಕ್ಷಣೀಯ ಸ್ಥಳಗಳಾಗಿವೆ. ಇತ್ತೀಚೆಗೆ ಈ ಎರಡೂ ಕಂಪನಿಗಳೂ ಪ್ರಕಟಿಸಿರುವ ವರ್ಷಾಂತ್ಯದ ಫಲಿತಾಂಶಗಳು ಭಾರತೀಯ ಐಟಿಗೆ ಆತ್ಮವಿಶ್ವಾಸ ತುಂಬಿವೆ. ಇನ್‌ಫೋಸಿಸ್‌ನ ಲಾಭದಲ್ಲಿ 24% ಹೆಚ್ಚಳವಾಗಿದ್ದರೆ ವಿಪ್ರೋದ ಲಾಭ 17% ಏರಿದೆ.

ಶ್ರೋಡರ್, ಬ್ಲೇರ್ ಮತ್ತು ರಾಂಗ್‌ಜಿ ಎಲ್ಲರೂ ಬೆಂಗಳೂರಿನ ಐಟಿ ವ್ಯವಸ್ಥೆಯನ್ನು ಕೊಂಡಾಡಿದ್ದಾರೆ. ಆದರೆ ರಾಂಗ್‌ಜಿ ಇಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಹೇಳಿದ ಮಾತುಗಳು ಭಾರತದ ಐಟಿಗೆ ಹೊಸ ಚೈತನ್ಯ ನೀಡುವುದಂತೂ ಖಂಡಿತಾ. ಅವರು ಹೇಳುವಂತೆ 'ಭಾರತದ ಸಾಫ್ಟ್‌ವೇರ್ + ಚೀನಾದ ಸಾಫ್ಟ್‌ವೇರ್' - ಇದು ಎರಡೂ ದೇಶಗಳ ಐಟಿ ಯಶಸ್ಸಿಗೆ ಪೂರಕ ಎಂದು.

ಇದು ಬೆಂಗಳೂರಿನ ಐಟಿ ಸಾಧನೆಗೆ ಸಂದ ಗೌರವವಲ್ಲದೆ ಮತ್ತೇನು? •

ಜಿ.ಪಿ. ವಿನಯಬಾಬು